# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಸಿಡಿ–337/2005/ಎಆರ್ಇ–10

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/06/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ. ಶ್ರೀನಿವಾಸ್, ಉಪ ನಿರ್ದೇಶಕರು, ಅಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರು ಪೂರ್ವ ವಲಯ, ಬೆಂಗಳೂರು, ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.,

*–*–*

ಸಾರ್ವಜನಿಕರು, ಎಫ್.ಪಿ.ಡಿ. ಮಾಲೀಕರು ಹಾಗೂ ನೊಂದ ನೌಕರರು, ಆಹಾರ ಇಲಾಖೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ)ರವರು ಶ್ರೀ. ಶ್ರೀನಿವಾಸ, ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರು ಪೂರ್ವ ವಲಯ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ), ಇವರ ವಿರುದ್ಧ ದೂರು ಸಲ್ಲಿಸಿದ್ದು, ಅಂಚೆಯ ಮೂಲಕ ಪಡೆದ ಈ ದೂರನ್ನು ಸ್ವಯಂ ಪ್ರೇರಿತ ದೂರೆಂದು ದಾಖಲಿಸಿಕೊಳ್ಳಲಾಗಿದ್ದು ತನಿಖೆಗೆ ತೆಗೆದುಕೊಂಡಿದೆ.

2. ದೂರುದಾರರು ಎದುರುದಾರರಾದ ಶ್ರೀ. ಶ್ರೀನಿವಾಸ, ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರು ಪೂರ್ವ ವಲಯ, ಇವರು ಪಡಿತರ ಪದಾರ್ಥಗಳು ಮತ್ತು ಪಡಿತರ ಚೀಟಿಗಳ ವಿತರಣೆಯಲ್ಲಿ ಅವ್ಯವಹಾರ ಮಾಡಿರುವುದಾಗಿ ಆಪಾದಿಸಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳವಂತೆ ಕೇಳಿಕೊಂಡಿದ್ದಾರೆ.

3. ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿಯವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದೂರಿನಲ್ಲಿರುವ ಆಪಾದನೆಗಳನ್ನು ಅಲ್ಲಗಳೆದು ಕಾನೂನು ರೀತಿಯ ಕಾರ್ಯನಿರ್ವಹಿಸಿರುವುದಾಗಿ ಹೇಳಿದ್ದಾರೆ. ಮುಂದುವರೆದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ :-

(i) ಸಿಬ್ಬಂದಿಯ ಮುಖಾಂತರ ಚಾಲನೆಗೊಂಡ ಕಡತವನ್ನು ಶಾಖೆಯ ವ್ಯವಸ್ಥಾಪಕರು ಮತ್ತು ಸಹಾಯಕ ನಿರ್ದೇಶಕರು ಪರಿಶೀಲಿಸಿ ಮಂಡಿಸಿದಾಗ ಸದರಿ ಕಡತವನ್ನು ಅಪರ ನಿರ್ದೇಶಕರು (ಸಂ.ವಿ)ರವರಿಗೆ ಸಲ್ಲಿಸುವುದು ಉಪನಿರ್ದೇಶಕನಾಗಿ ತನ್ನ ಕರ್ತವ್ಯವಾಗಿತ್ತು. ಅಪರ ನಿರ್ದೇಶಕರು ಕಡತವನ್ನು ಸಂಪೂರ್ಣ ಪರಿಶೀಲಿಸಿ ಅನುಮೋದನೆಗಾಗಿ ಕಡತವನ್ನು ಮಾನ್ಯ ಆಯುಕ್ತರಿಗೆ ಸಲ್ಲಿಸುವರು. ಆಯುಕ್ತರು ಕಡತದ ಬಗ್ಗೆ ಪರಿಶೀಲಿಸಿ ಅನುಮೋದನೆಯನ್ನು ನೀಡುವ ಅಂತಿಮ ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸುವರು. ಆಯುಕ್ತರು ವಿನಃ ಅಂತಿಮ ನಿರ್ಣಯವನ್ನು ಕೈಗೊಳ್ಳುವ ಅಧಿಕಾರವು ಬೇರೆ ಕೆಳ ಹಂತದ ಇತರೆ ಯಾರಿಗೂ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಸ್ವತಂತ್ರವಾಗಿ ತನ್ನಿಂದಲೇ ಹೆಚ್ಚುವರಿ ಪಡಿತರ ಹಂಚಿಕೆಯನ್ನು ಮಾಡಲು ಸಾಧ್ಯವಿರುವುದಿಲ್ಲ.

(ii) ಪರಿವೀಕ್ಷಣೆಯ ಅವಧಿಯನ್ನು ಪೂರೈಸಿದ ನಂತರ ಆಯುಕ್ತರ ಕೇಂದ್ರ ಕಚೇರಿಯಲ್ಲಿ ಸಂಗ್ರಹಣೆ ಮತ್ತು ವಿತರಣೆ ಶಾಖೆಯ ಉಪ ನಿರ್ದೇಶಕರಾಗಿ ನೇಮಕಗೊಂಡು ಕೇಂದ್ರ ಕಚೇರಿಯಲ್ಲಿ ಆಯುಕ್ತರ ಸಹಾಯಕನಾಗಿ ಕಾರ್ಯನಿರ್ವಹಿಸಲಾಗಿರುತ್ತದೆ. ಇಲ್ಲಿ ಸ್ವತಂತ್ರವಾಗಿ ತಾನೇ ನೇರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಯಾವುದೇ ಅಧಿಕಾರವು ಇರಲಿಲ್ಲವೆಂಬುದನ್ನು ಪುನರುಚ್ಚರಿಸಿದ್ದಾರೆ. ತಾನು ಕಾರ್ಯನಿರ್ವಹಿಸುತ್ತಿದ್ದ ಸಂಗ್ರಹಣೆ ಮತ್ತು ವಿತರಣೆ ಶಾಖೆಯಲ್ಲಿ ವಿಧಾನ ಮಂಡಲದ ಅಧಿವೇಶನದ ಕಾರ್ಯಕಲಾಪಗಳು ಹಾಗೂ ಪ್ರಶ್ನಾವಳಿಗಳಿಗೆ ಉತ್ತರಿಸಬೇಕಾದಂತಹ ಕಾರ್ಯವನ್ನು ನಿರ್ವಹಿಸಬೇಕಾಗಿದ್ದು, ಈ ಸಂದರ್ಭದಲ್ಲಿ ಸಾಮಾನ್ಯವಾಗಿ ಕಚೇರಿ ವೇಳೆಯನ್ನು ಮೀರಿ ಕಾರ್ಯನಿರ್ವಹಿಸಬೇಕಾಗಿದ್ದು ಕೆಲವೊಮ್ಮೆ ಸ್ಥಳೀಯ ನಗರ ಸಾರಿಗೆ ವ್ಯವಸ್ಥೆಯು ನಿಲುಗಡೆಯಾಗುವ ವೇಳೆಯವರಿಗೂ ಕಾರ್ಯ ನಿರ್ವಹಿಸಬೇಕಾದಂತಹ ಪರಿಸ್ಥಿತಿ ಉಂಟಾಗುತ್ತಿತ್ತು.

(iii) ಆಯುಕ್ತರ ಅಧೀನದ ಸಂಗ್ರಹಣೆ ಮತ್ತು ವಿತರಣೆ ಶಾಖೆಯಲ್ಲಿ ಉಪನಿರ್ದೇಶಕನಾಗಿ ತಾನು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಜಿಲ್ಲಾವಾರು ಬೇಡಿಕೆಯನ್ನು ಆಧರಿಸಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಾಗೂ ರಾಜ್ಯ ಸರ್ಕಾರದಿಂದ ಸ್ವೀಕರಿಸಿ ನೀಡಿದ ಆದೇಶದಂತೆ ಜಿಲ್ಲಾವಾರು ಬೇಡಿಕೆಯನ್ನು ಆಧರಿಸಿ ಪಡಿತರ ವಸ್ತುಗಳ ಹಂಚಿಕೆ ಕಾರ್ಯವನ್ನು ಮಾಡಲು ಆಯುಕ್ತರಿಗೆ ಸಹಾಯಕನಾಗಿ ಕಾರ್ಯನಿರ್ವಹಿಸಿರುವುದು ನಿಜವಿರುತ್ತದೆ. ಜಿಲ್ಲಾವಾರು ಹಂಚಿಕೆಯನ್ನು ಮಾಡಲು ಹಾಗೂ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಸರ್ಕಾರ ನಿಗಧಿಪಡಿಸಿದ ಪ್ರಮಾಣದಲ್ಲಿ ಪಡಿತರ ವಸ್ತುಗಳ ಹಂಚಿಕೆಗೆ

ಕ್ರಮವಹಿಸಲಾಗುತ್ತಿತ್ತು. ಅದೇ ರೀತಿ ಸೀಮೆಎಣ್ಣೆ ಹಂಚಿಕೆಯನ್ನು ಮಾಡುವಾಗಲೂ, ಅನಿಲ(ಗ್ಯಾಸ್), ಅನಿಲ ರಹಿತ (ನಾನ್ ಗಾಸ್) ಪಡಿತರ ಚೀಟಿಗಳ ಬಗ್ಗೆ ಮಾಹಿತಿಯನ್ನು ಪಡೆದು ಅದರಂತೆ ಹಂಚಿಕೆಯನ್ನು ಮಾಡಲು ಕ್ರಮವಹಿಸಲಾಗುತ್ತಿತ್ತು. ಮುಂದುವರಿದಂತೆ ಸಕ್ಕರೆಯ ಹಂಚಿಕೆಯನ್ನು ಕಾರ್ಖಾನೆಗಳಿಂದ ನೇರವಾಗಿ ಎತ್ತುವಳಿ ಮಾಡಬೇಕಾದುದ್ದರಿಂದ ಸಕ್ಕರೆ ಕಾರ್ಖಾನೆಗಳಿಂದ ಬಿಡುಗಡೆಗೆ ಆದೇಶ ಮಾಡುವ ಪ್ರಮಾಣವನ್ನು ಆಧರಿಸಿ ಜಿಲ್ಲಾವಾರು ಹಂಚಿಕೆಯನ್ನು ಮಾಡಬೇಕಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ಸಕ್ಕರೆ ಕಾರ್ಖಾನೆಗಳು ಇರುವುದಿಲ್ಲ. ಹೆಚ್ಚಿನ ಸಕ್ಕರೆ ಕಾರ್ಖಾನೆಗಳು ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿರುತ್ತದೆ. ಮಾಹೆಯಾನ ಸಕ್ಕರೆ ಹಂಚಿಕೆಯು ಕಾರ್ಖಾನೆಯಿಂದ ಕಾರ್ಖಾನೆಗೆ ವ್ಯತ್ಯಾಸವಾಗುವುದರಿಂದ ಹಂಚಿಕೆಯಲ್ಲಿಯೂ ಜಿಲ್ಲಾವಾರು ವ್ಯತ್ಯಾಸವಾಗುವುದು ಸಾಮಾನ್ಯವಿರುತ್ತದೆ. ಕೇಂದ್ರ ಸರ್ಕಾರದ ಈ ನೀತಿಯನ್ನು ಪ್ರಶ್ನಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಸೇರಿದ್ದೆ ಹೊರತು ಯಾವುದೇ ರೀತಿಯಲ್ಲು ಸ್ವತಂತ್ರ ಅಧಿಕಾರವಿಲ್ಲದ ತನ್ನದಲ್ಲ. ಆಯುಕ್ತರಿಂದ ಅನುಮೋದಿಸಲ್ಪಟ್ಟ ಆದೇಶವನ್ನು ಅನುಷ್ಠಾನಗೊಳಿಸಲು ಜಿಲ್ಲಾ ಕಚೇರಿಗಳಿಗೆ ಕಳುಹಿಸಲಾಗುತ್ತಿತ್ತು. ಇದರ ವಿನಃ ಸ್ವತಂತ್ರವಾಗಿ ತಾನು ಯಾವುದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡಿರುವುದಿಲ್ಲ. ಅಂತಹ ಅಧಿಕಾರವು ಇರುವುದಿಲ್ಲ. ಆದ್ದರಿಂದ ದೂರು ಅರ್ಜಿಯಲ್ಲಿನ ಅಂಶಗಳು ಸತ್ಯಕ್ಕೆ ದೂರವಾಗಿದ್ದು, ದೂರದ ಕಾರ್ಖಾನೆಗಳ ಸಕ್ಕರೆ ಹಂಚಿಕೆಯನ್ನು ಮಾಡಿರುವ ಪದ್ಧತಿಯನ್ನು ಸಿಎಜಿ ರವರು 1997–98ನೇ ಅವಧಿಯ ವರದಿಯಲ್ಲಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ತಾನು ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಸಕ್ಕರೆ ಹಂಚಿಕೆಯ ವಿಷಯವನ್ನು 2000 ಸಾಲಿನ ಮಾರ್ಚ್ ತಿಂಗಳಿನಿಂದ ಸಂ.ವಿ. ಶಾಖೆಗೆ ನೀಡಲಾಗಿದ್ದು ತನ್ನ ಕಾಲಾವಧಿಯಲ್ಲಿ ಮಾಡಿರುವ ಆಪಾದನೆಯು ಸತ್ಯಕ್ಕೆ ದೂರವಾಗಿರುತ್ತದೆ. ಮುಖ್ಯವಾಗಿ ಈ ರೀತಿ ಸಕ್ಕರೆಯ ಹಂಚಿಕೆಯನ್ನು 2000ನೇ ಸಾಲಿನಲ್ಲಿ ಸಂಗ್ರಹಣೆ ಮತ್ತು ವಿತರಣೆ ಶಾಖೆಗೆ ನೀಡಿದ ನಂತರ ದೂರು ಅರ್ಜಿಯಲ್ಲಿ ತಿಳಿಸಿರುವಂತೆ ಹಂಚಿಕೆಗೆ ಕಡಿವಾಣ ಹಾಕಲಾಗಿರುತ್ತದೆ.

(iv) ಜಿಲ್ಲಾ ವ್ಯಾಪ್ತಿಯಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಗುರುತಿಸುವ ಕಾರ್ಯ ಜಿಲ್ಲಾಡಳಿತಕ್ಕೆ ಸಂಬಂಧಿಸಿದ್ದುದ್ದಾಗಿರುತ್ತದೆ. ಜಿಲ್ಲಾಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳು ಹಾಗೂ ನೌಕರರಿಗೆ ಸೂಚನೆಗಳನ್ನು ನೀಡಿ ಸರ್ಕಾರದ ಆದೇಶವನ್ನು ಕಾರ್ಯಗತಗೊಳಿಸಲು ಕ್ರಮವಹಿಸುವರು. ಈ ಸಂದರ್ಭದಲ್ಲಿ ಸರ್ಕಾರದ ಆದೇಶವನ್ನು ಆಯುಕ್ತರ ಮುಖಾಂತರ ಜಿಲ್ಲಾಡಳಿತಕ್ಕೆ ತಲುಪಿಸಲು ಸಹಾಯಕನಾಗಿ ಕಾರ್ಯನಿರ್ವಹಿಸಲಾಗಿದೆಯೆ ವಿನಃ ದೂರು ಅರ್ಜಿಯಲ್ಲಿ ಆರೋಪಿಸಿರುವಂತೆ ಕಡುಬಡವರ

ಕಾರ್ಡ್‌ಗಳನ್ನು ಆಗಿಂದಾಗ್ಗೆ ಹೆಚ್ಚು ಕಡಿಮೆ ಮಾಡುವ ಯಾವುದೇ ಅಧಿಕಾರ ತನಗಿರಲಿಲ್ಲ. ಜಿಲ್ಲಾಧಿಕಾರಿಗಳ ಬೇಡಿಕೆಯನ್ನು ಆಧರಿಸಿ ಪಡಿತರ ಚೀಟಿಗಳನ್ನು ಸರ್ಕಾರಿ ಮುದ್ರಣಾಲಯದ ಮುಖಾಂತರ ಮುದ್ರಿಸಲು ಕ್ರಮವಹಿಸಲಾಗಿತ್ತೆ ವಿನಃ ಖಾಸಗಿ ಮುದ್ರಣಾಲಯದಲ್ಲಿ ತಾನು ಕಾರ್ಯನಿರ್ವಹಿಸಿದ ಅವಧಿಯಲ್ಲಿ ನೀಡಿರುವುದಿಲ್ಲ. ಆದ್ದರಿಂದ ದೂರು ಅರ್ಜಿಯಲ್ಲಿನ ಆರೋಪವನ್ನು ಅಸತ್ಯವೆಂಬುದಾಗಿ ಪರಿಗಣಿಸ ಬಹುದಾಗಿರುತ್ತದೆ. ಸೀಮೆ ಎಣ್ಣೆ ಕೂಪನ್‌ಗಳನ್ನು ಜಿಲ್ಲೆಯ ಬೇಡಿಕೆಯನ್ನು ಆಧರಿಸಿ ಹಂಚಿಕೆ ಮಾಡಲಾಗಿರುತ್ತದೆ. ಪ್ರಥಮವಾಗಿ ತನ್ನ ಅಧಿಕಾರವಧಿಯಲ್ಲಿ ಕೂಪನ್‌ಗಳ ಮುದ್ರಣವನ್ನು ಸರ್ಕಾರಿ ಮುದ್ರಣಾಲಯದಲ್ಲಿ ಮಾಡಿಸಲಾಗಿದ್ದು, ಅದಕ್ಕೆ ಮುಂಚೆ ಜಿಲ್ಲಾಡಳಿತಗಳು ಸ್ಥಳೀಯವಾಗಿ ಖಾಸಗಿ ಮುದ್ರಣಾಲಯದಲ್ಲಿ ಮುದ್ರಿಸುವ ಪರಿಪಾಠ ರೂಢಿಯಲ್ಲಿತ್ತು.

(v) ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಚೀಟಿದಾರರಿಗೆ ವಿತರಿಸಲು ಹಂಚಿಕೆ ನೀಡಲಾಗಿದ್ದ ಗೋಧಿಯನ್ನು ಜಿಲ್ಲಾವಾರು ಬೇಡಿಕೆಯನ್ನು ಆಧರಿಸಿ ಹಂಚಿಕೆಯನ್ನು ನೀಡಲಾಗಿದೆಯೇ ವಿನಃ ಫ್ಲೋರ್‌ಮಿಲ್‌ಗಳಿಗೆ ಹಂಚಿಕೆ ನೀಡಲು ಬರುವುದಿಲ್ಲ. ಮೇಲಾಗಿ ತಾನು ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಫ್ಲೋರ್‌ಮಿಲ್‌ಗಳಿಗೆ ಈ ರೀತಿ ಯಾವುದೇ ಹಂಚಿಕೆಯು ಬಿಡುಗಡೆಯಾಗಿರುವುದಿಲ್ಲ. ಆದ್ದರಿಂದ ಈ ದೂರಿನಲ್ಲಿನ ಅಂಶಗಳು ಸತ್ಯಕ್ಕೆ ದೂರವಾಗಿರುತ್ತವೆ ಎಂದು ಉತ್ತರಿಸಿರುವರು.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ :-

ಕೆಳಹಂತದ ಸಿಬ್ಬಂದಿಯ ಮುಖಾಂತರ ಚಾಲನೆಗೊಂಡ ಪಡಿತರ ಹಂಚಿಕೆ ಕಡತವನ್ನು ಶಾಖೆಯ ವ್ಯವಸ್ಥಾಪಕರು ಮತ್ತು ಸಹಾಯಕ ನಿರ್ದೇಶಕರು ಪರೀಶೀಲಿಸಿ ಮಂಡಿಸಿದಾಗ ಎದುರುದಾರರು ಸಂಪೂರ್ಣವಾಗಿ ಕಡತವನ್ನು ಪರಿಶೀಲಿಸಿ ಆಯುಕ್ತರಿಗೆ ಮಂಡಿಸಿರುವುದಿಲ್ಲ. ಜಿಲ್ಲಾ ಕಛೇರಿಗಳಿಗೆ ಹೆಚ್ಚುವರಿ ಪಡಿತರ ಹಂಚಿಕೆಯನ್ನು ಮಾಡಿರುತ್ತಾರೆ. ಆಯುಕ್ತರ ಕೇಂದ್ರ ಕಛೇರಿಯಲ್ಲಿ ಸಂಗ್ರಹಣೆ ಮತ್ತು ವಿತರಣೆ ಶಾಖೆಯ ಉಪನಿರ್ದೇಶಕರಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಹೊಣೆಗಾರಿಕೆ ಎದುರುದಾರರಿಗೆ ಸಹ ಇರುತ್ತದೆ. ವಿನಾ ಕಾರಣ ಕಛೇರಿಯ ವೇಳೆಯನ್ನು ಮೀರಿ ಕಛೇರಿಯಲ್ಲಿ ಉಪಸ್ಥಿತರಿರುತ್ತಾರೆ. ಪಡಿತರ ಜಿಲ್ಲಾವಾರು ಹಂಚಿಕೆಯನ್ನು ಮಾಡಲು ಸಮರ್ಪಕವಾಗಿ ಕೆಲಸ ನಿರ್ವಹಿಸಿಲ್ಲ. ಇದೇ ರೀತಿ ಸೀಮೆಎಣ್ಣೆ ಹಂಚಿಕೆಯನ್ನು

ಮಾಡುವಾಗಲೂ, ಅನಿಲ(ಗ್ಯಾಸ್), ಅನಿಲ ರಹಿತ (ನಾನ್ ಗ್ಯಾಸ್) ಪಡಿತರ ಚೀಟಿಗಳ ಬಗ್ಗೆ ಮಾಹಿತಿಯನ್ನು ಪಡೆದು ಅದರಂತೆ ಹಂಚಿಕೆಯನ್ನು ಮಾಡಲು ಕ್ರಮ ವಹಿಸಿಲ್ಲ. ಸಕ್ಕರೆ ಹಂಚಿಕೆಯನ್ನು ಕಾರ್ಖಾನೆಗಳಿಂದ ನೇರವಾಗಿ ಎತ್ತುವಳಿ ಮಾಡುವ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿಲ್ಲ. ದೂರು ನೀಡಿದ ನಂತರವಷ್ಟೆ ಸಕ್ಕರೆ ಹಂಚಿಕೆಗೆ ಕಡಿವಾಣ ಹಾಕಿರುತ್ತಾರೆ. ಕಡು ಬಡವರ ಪಡಿತರ ಕಾರ್ಡ್‌ಗಳನ್ನು ಹೆಚ್ಚು ಕಡಿಮೆ ಮಾಡಿದ್ದಾರೆ. ಸೀಮೆ ಎಣ್ಣೆಯನ್ನು ಪಡಿತರ ಚೀಟಿಗಳು ಮತ್ತು ಎಲ್‌ಪಿಜಿ ಸಂಪರ್ಕಗಳನ್ನು ಆಧರಿಸಿ ಹಂಚಿಕೆ ಮಾಡಿಲ್ಲ. ಕೂಪನ್‌ಗಳ ಮುದ್ರಣವನ್ನು ಸರ್ಕಾರಿ ಮುದ್ರಣಾಲಯದಲ್ಲಿ ಮಾಡಿಸದೆ ಖಾಸಗಿ ಮುದ್ರಣಾಲಯದಲ್ಲಿ ಮಾಡಿಸಿದ್ದಾರೆ. ಹಾಕರ್ ಪರವಾನಗಿದಾರರನ್ನು ಚಿಲ್ಲರೆ ಮಾರಾಟಗಾರರಾಗಿ ಪರಿವರ್ತಿಸಲು ಸುತ್ತೋಲೆ ಹೊರಡಿಸುವಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಿಲ್ಲ, ಗಣಕಿಕೃತ ಪಡಿತರ ಚೀಟಿಯನ್ನು ವಿತರಿಸಲು ಸಮರ್ಪಕವಾಗಿ ಕೆಲಸ ನಿರ್ವಹಿಸಿಲ್ಲ. ಪಡಿತರ ಚೀಟಿಯನ್ನು ವಿತರಿಸುವ ಹಾಗೂ ಪಡಿತರ ಹಂಚಿಕೆ ಕರ್ತವ್ಯ ಉಸ್ತುವಾರಿ ಸರಿಯಾಗಿ ನಿರ್ವಹಿಸಿಲ್ಲ. ಆಹಾರ ನಿರೀಕ್ಷಕರ ಮೇಲೆ ಸರಿಯಾಗಿ ಮೇಲುಸ್ತುವಾರಿ ಮಾಡಿರುವುದಿಲ್ಲ. ಮೇಲ್ಕಂಡ ಆರೋಪಗಳನ್ನು ಅಲ್ಲಗಳೆಯಲು ಎದುರುದಾರರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

5) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆಪಾದಿತ ಸರ್ಕಾರಿ ನೌಕರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

6) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

7) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966ರ

ನಿಯಮ 3(1)(i)(ii) ಮತ್ತು (iii) ರನ್ವಯ ದುರ್ನಡತೆಯೆಸಗಿದ್ದು, ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಾದ ಶ್ರೀ. ಶ್ರೀನಿವಾಸ್, ಉಪ ನಿರ್ದೇಶಕರು, ಅಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರು ಪೂರ್ವ ವಲಯ, ಬೆಂಗಳೂರು, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದೂ ಕೋರಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 19/6

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
19/6 ಕರ್ನಾಟಕ ರಾಜ್ಯ,
ಬೆಂಗಳೂರು.